ಪ್ರಚಂಡ ಚಾರುದತ್ತರು ಬರೆದಿಟ್ಟಿದ್ದ 'ರಕ್ತಚಂದನ ಎಂಬ ಜೀವಿತ ಚರಿತ್ರೆ'ಯ ಹಸ್ತಪ್ರತಿ ಅಪಹರಿಸಿ, ಈಗ ತನ್ನದೇ ಎಂಬಂತೆ ಹೊರತರಲು ಹೊರಟಿದ್ದಾಳೆ. ಪಾತಕಿ. ಆ ಪಾತಕದಲ್ಲಿ ನನಗೂ ಒಂದು ಪಾಲಿದ್ದರೂ ಅದರ ಯಾವ ಲಾಭವನ್ನೂ ನನಗೆ ಕೊಡುವ ಯೋಚನೆಯಲ್ಲೂ ಇಲ್ಲ ಅವಳು. ಎಲ್ಲ ಖ್ಯಾತಿಯನ್ನೂ ತಾನೇ ಗೋರಿಕೊಳ್ಳಲು ಹೊರಟಿದ್ದಾಳೆ.

ಅವಳು ಕನಸಲ್ಲಿ ಬಂದಿರುವುದು ಗೊತ್ತಾಗಿಯೋ ಏನೋ, ಚಾರುದತ್ತರು ಮತ್ತೆ ಪ್ರವೇಶಿಸುತ್ತಾರೆ. ಅವರ ಮುಖ ಮಂಕಾಗಿರುತ್ತದೆ.

'ದಮ್ಮಯ್ಯ ಮಾರಾಯ, ಅವಳು ಬರೆದ ಪುಸ್ತಕದಿಂದ ನನ್ನ ಮರ್ಯಾದೆ ಉಳಿಸು, ನಿನ್ನ ಕಾಲು ಬೇಕಾದರೂ ಹಿಡಿಯುತ್ತೇನೆ.'

'ಗುರುಗಳೇ, ನಿಮ್ಮ ಮರ್ಯಾದೆ ಉಳಿಸುವುದು ನನ್ನ ರಾಜಧರ್ಮ' ಎಂದು ನಿದ್ದೆಯಿಂದ ಎದ್ದು, ಒಂದು ಖಾಲಿ ಟೀ ಮಾಡಿ ಕುಡಿದು ಬರೆಯಲು ಕೂರುತ್ತೇನೆ. ಎಷ್ಟು ಜೋರಾಗಿ ಹೂಂಕರಿಸಿದರೂ ಎಷ್ಟು ಮೆತ್ತಗೆ ರಮಿಸಿದರೂ ಕಥೆ ಮುಂದೆ ಹೋಗುತ್ತಿಲ್ಲ.

ತೀರಿಹೋದ ಮೇಲೆ ದೈನೇಸಿಯಾಗಿರುವ ಚಾರುದತ್ತರ ಮುಖ ನನ್ನನ್ನೂ ಮಂಕುಮಾಡುತ್ತಿದೆ.

ಬಹುಶಃ ಸಾಯುವ ಕೆಲವು ತಿಂಗಳುಗಳ ಮೊದಲು ಇರಬೇಕು. ಚಾರುದತ್ತರಿಗೆ ತಾನು ಇನ್ನು ಕೆಲವೇ ಕಾಲದಲ್ಲಿ ಸಾಯಬಹುದೆಂದು ಅನಿಸಿತ್ತು. ಅದಕ್ಕೇ ಇರಬೇಕು, ತಮ್ಮ ಕಾಫಿ ತೋಟದ ಏಲಕ್ಕಿ ಗೂಡಿನ ಒಂದು ಮೂಲೆಯಲ್ಲಿ ಶೇಖರಿಸಿದ್ದ ರಕ್ತಚಂದನ ಮರದ ಪುರಾತನ ಗೆಲ್ಲುಗಳನ್ನು ಆಳುಗಳಿಂದ ಬಂಗಲೆಯ ಎದುರಿನ ಭತ್ತದ ಬಯಲಿಗೆ ಸಾಗಿಸಿದ್ದರು. ಅಲ್ಲಿ ಉದ್ದಕ್ಕೆ ಸ್ವರ್ಗಕ್ಕೆ ತಾಗುವ ಹಾಗೆ ಬೆಳೆದು ನಿಂತಿದ್ದ ಹೆಬ್ಬಲಸಿನ ಮರದಡಿಯಲ್ಲಿ ಸೌದೆಯಂತೆ ಪೇರಿಸಲು ಹೇಳಿ, ಮಳೆ ತಾಗದ ಹಾಗೆ ಅದರ ಮೇಲೆ ಟಾರ್ಪಾಲಿನಿಂದ ಮುಚ್ಚಿಸಿದ್ದರು. ಆ ಹೆಬ್ಬಲಸಿನ ಅಡಿಯಲ್ಲಿ ಈಗಾಗಲೇ ಎರಡು ಸಮಾಧಿಗಳಿವೆ. ಒಂದು ಚಾರುದತ್ತರ ಅಪ್ಪಯ್ಯ ಗಣಪಯ್ಯ ಜೋಯಿಸರದು. ಇನ್ನೊಂದು ಗಣಪಯ್ಯ ಜೋಯಿಸರ ತಂದೆಯದು, ಬ್ರಿಟಿಷರ ಕಾಲದ್ದು. ಆ ಎರಡು ಐತಿಹಾಸಿಕ ಸಮಾಧಿಗಳ ಬದಿಯಲ್ಲಿ ತಾವೂ ಅಜರಾಮರರಾಗಬೇಕು ಅನ್ನುವುದು ಅವರ ಕೊನೆಗಾಲದ ಆಸೆ.

'ಈ ಹಾಳಾದ ಆಳುಮಕ್ಕಳಿಗೇನಾದರೂ ಅದು ರಕ್ತಚಂದನ ಅಂತ ಗೊತ್ತಾದರೆ ಪುಸ್ಕ. ಒಂದು ಕಡ್ಡಿಯ ಪುಡಿಯೂ ಅಲ್ಲಿ ಉಳಿಯಲಿಕ್ಕಿಲ್ಲ. ಅವರಿಗೆ ಗೊತ್ತಾಗದ ಹಾಗೆ ನೋಡಿಕೋ' ಅಂತ ಸೊಸೆ ಸೌಭಾಗ್ಯಳಿಗೆ ಹೇಳಿದ್ದರು.

ಸೊಸೆಗೆ ಹಾಗೆ ಹೇಳಿದ್ದನ್ನು ಆಮೇಲೆ ನನಗೂ ಫೋನಲ್ಲಿ ಹೇಳಿದ್ದರು.

ಸೊಸೆ ಸೌಭಾಗ್ಯಳ ಮೇಲೆ ಅವರಿಗೆ ಒಂದು ತರಹದ ಭಯ, ಇನ್ನೊಂದು ತರಹದ ಭಕ್ತಿ. ಆದರೆ, ಎಲ್ಲಕ್ಕಿಂತ ದೊಡ್ಡದಾಗಿ ದೊಡ್ಡ ಅಸಹನೆ. ತಾನು ಸತ್ತು ಹೋದ ಮೇಲೆ ಅವಳೇ ದೊಡ್ಡ ಮಹಾರಾಣಿಯ ಹಾಗೆ ಅಷ್ಟೂ ಆಸ್ತಿಯ ಮೇಲೆ ಸವಾರಿ ಮಾಡುತ್ತಾಳಲ್ಲಾ ಅಂತ ಉರಿ. ಆ ಉರಿಯ ಶಮನಕ್ಕಾಗಿ ಅವರು ವಿಲಾಸಿನಿಯನ್ನು ಬಳಸಿಕೊಂಡಿದ್ದರು. ವಿಲಾಸಿನಿಯನ್ನು ಅಂತರಂಗದ ಅಂತಃಪುರಕ್ಕೆ ಬಿಟ್ಟುಕೊಂಡು ಸೊಸೆಯ ಪೊಟ್ಟು ಗಾಂಭೀರ್ಯವನ್ನು ಠುಸ್ಸು ಮಾಡಬಹುದು ಎಂಬುದು ಅವರ ಅಂದಾಜು. ಆದರೆ, ಆ ಸೊಸೆಯೋ ಏನೂ ಆಗಿಯೇ ಇಲ್ಲವೇನೋ ಎನ್ನುವ ಹಾಗೆ ದೊಡ್ಡ ಗಾಂಭೀರ್ಯದ ಮುಖ ಮಾಡಿಕೊಂಡು ಮನೆಯ ತುಂಬ ನಡೆಯುತ್ತಿದ್ದಳು.

'ನನ್ನ ಮಗ ಊರು ಬಿಟ್ಟು ದೇಶಾಂತರ ಹೋಗಿರುವುದು ನನ್ನ ಮೇಲೆ ಜಿಗುಪ್ಸೆ ಮಾಡಿಕೊಂಡು ಅಲ್ಲ ಮಾರಾಯ, ಇವಳ ಅಭೇದ್ಯ ಗೊಂಡಾರಣ್ಯದೊಳಗೆ ಹೇಗೆ ಹೊಕ್ಕುವುದು ಎಂದು ಗೊತ್ತಾಗದೆ' ಎಂದು ಚಾರುದತ್ತರು ನಕ್ಕಿದ್ದರು.

ಅವರು ಹೇಳುವುದು ನಿಜವಿರಲೂಬಹುದು ಎಂದು ನನಗೂ ಅನಿಸಿತ್ತು. ಕೆಲಸಕ್ಕೆ ಬಾರದ